PW-6
CW-13

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

SPL.Case(NDPS) 284/2023

ಸಾಕ್ಷಿದಾರರ ಹೆಸರು : ಎನ್ ಸಿ ಚನ್ನವೀರಪ್ಪ

ತಂದೆಯ/ಗಂಡನ ಹೆಸರು : ಚಿಕ್ಕಪ್ಪ

ವಯಸ್ಸು : 60 ವರ್ಷ

ಉದ್ಯೋಗ : ನಿವೃತ್ತ ಪೋಲೀಸ್ ಉಪನೀರೀಕ್ಷಕರು, ದಾವಣಗೆರೆ

ವಾಸ ಸ್ಥಳ : ದಾವಣಗೆರೆ

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 13

ದಿ: 23-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. 2018 ರಿಂದ 2023 ಜೂನ್ ವರೆಗೂ ನಾನು ASI ಆಗಿ ಹದಡಿ ಪೋಲೀಸ್ ಠಾಣೆ ಯಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿನಾಂಕಃ 19-12-2022 ರಂದು ಮದ್ಯಾಹ್ನ 2-30 ಗಂಟೆಗೆ ನಾನು ಠಾಣಾ ಪ್ರಬಾರ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರು ಮತ್ತು ಆರೋಪಿ, ಪಂಚನಾಮೆ ಮತ್ತು ಮಾಲನ್ನು ಸ್ವೀಕರಿಸಿರುತ್ತೇನೆ. ಅ ದೂರಿನ ಬಾಬ್ತು ಠಾಣಾ ಅಪರಾಧ ಕ್ರಮಾಂಕ 200/2022 ಕ್ಕೆ ದಾಖಲಸಿದ್ದೆನು‌ಠ ಆ ದೂರು ಈಗಾಗಲೇ ನಿ.ಪಿ.- 16 ಎಂದು ಇದ್ದು ನನ್ನ ಸಹಿಯನ್ನು ನಿ.ಪಿ.- 16(ಬಿ) ಅಂತ ಗುರುತಿಸುತ್ತೇನೆ. ಎಪ್ ಐ ಆರ್ ನ್ನು ನೋಡುತ್ತಿದ್ದು ಅದನ್ನು ನಿ.ಪಿ.- 27 ಅಂತ ಗುರುತಿಸುತ್ತೇನೆ. ನನ್ನ ಸಹಿ ಮಾಡಿದ್ದೇನೆ. ತದ ನಂತರ ಸ್ವೀಕರಿಸಿದ ಪಂಚನಾಮೆಯನ್ನು ಈಗ

PW-6
CW-13

ನೋಡುತ್ತಿದ್ದು ಅದು ಈಗಾಗಲೇ  ನಿ.ಪಿ.- 8 ಇರುತ್ತದೆ. ಸ್ವೀಕರಿದ ಮಾಲನ್ನು ಸೊತಿತನ ಪಟ್ಟಿಗೆ ಅಳವಡಿಸ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೇ. ಚಾಸಾ-2 ಮತ್ತು 3 ರವರ ಹಾಗೂ ಸಿಬ್ಬಂದಿಗಳಾದ ಚಾಸಾ-6 ರಿಂದ 8 ರವರ ಹೇಳಿಕೆಯನ್ನುಪಡೆದುಕೊಂಡಿರುತ್ತೇನೆ. ನಂತರ ಚಾಸಾ-12 ರವರಿಂದ 65 ಬಿ ಪ್ರಮಾಣಪತ್ರ ನಿ.ಪಿ.- 26 ನ್ನು ಪಡೆದುಕೊಂಡು ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿಗೆ ನೋಟೀಸ ನೀಡಿ ಹಾಜರಾಗಲು ಕಂ 41 (ಎ) Cr.P.C. ನೋಟೀಸನ್ನು ಜಾರಿ ಮಾಡಿರುತ್ತೇನೆ.  ಆರೋಪಿಯು ಹಾಜರಾಗದೇ ಇದುದ್ದರಿಂದ ಚಾಸಾ- 5 ಮತ್ತ ಚಾಸಾ-6 ರವರನ್ನು ನೇಮಿಸಿ ಕಳುಹಿಸಿರುತ್ತೇನೆ. ಅವರು ಸಂಜೆ 4-30 ಸಮಯದಲ್ಲಿ ಆರೋಪಿಯನ್ನು ಕರೆತಂದಿರುತ್ತಾರೆ. ಆರೋಪಿತನಿಗೆ ದಸ್ತಗಿರಿ ಕ್ರಮ ಜರುಗಿಸಿ ಆರೋಪಿ ಸ್ವ ಇಚ್ಛಾ ಹೇಳಿಕೆ ಪಡೆದು ದಸ್ತಗಿರಿ ಮಾಡಿದ ಬಗ್ಗೆ ತಿಳುವಳಿಕೆ ನೋಟೀಸು ನೀಡಿ ಅವರ ಸಂಬಂದಿಕರಿಗೆ ದೂರವಾಣಿ ಮೂಲ ತಿಳಿಸಲಾಯಿತು. ಆರೋಪಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ಚಾಸಾ- 5 ಮತ್ತು 6 ರವರ ಬಂಗಾವಲಿನಲ್ಲಿ ನ್ಯಾಯಾಂಗ ವಶಕ್ಕೆ ನೀಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಮತಿ CPA  ವಕೀಲರಿಂದ ಆರೋಪಿತರ ಪರವಾಗಿ**:

2. ಕಲಂ 41 (ಎ) Cr.P.C. ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮಾನ್ಯ ಸರ್ಮೋಚ್ಚ ನ್ಯಾಯಾಲಯದ ನಿಯಮದ ಪ್ರಕಾರ ದಸ್ತಗಿರಿ ಆದ ಬಗ್ಗೆ ನಿಯಮ ಪಾಲನೆ ಬಾಬ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆರೋಪಿಯ ಗುರುತು ಕವಾಯಿತು ಮಾಡಿರುವುದಿಲ್ಲ. ಪಂಚನಾಮೆದಲ್ಲಿ ನನ್ನ ಸಹಿ ಇಲ್ಲ. ಸಾಕ್ಷಿಯ ಹೇಳಿಕೆ ಪಡೆಯುವ ಕಾಲಕ್ಕೆ ಘಟನಾ ಸ್ಥಳದ ಸಂಪೂರ್ಣ ವಿವರಣೆ ಪಡೆದುಕೊಂಡಿರುತ್ತೇನೆ. ನಾನು ಹೇಳಿದ ರೀತಿ ಹೇಳಿಕೆ ಪಡೆದಿಲ್ಲ, ತನಿಖೆ ಮಾಡಿಲ್ಲ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿಯೇ ದಾಖಲೆಗಳನ್ನು ಸೃಷ್ಠಿ ಮಾಡಿದ್ದೇನೆ

PW-6
CW-13

ಎಂದರೆ ಸರಿಯಲ್ಲ. ಸ್ಥಳದಲ್ಲಿ ದಾಖಲೆ ಮಾಡಿದ ಬಗ್ಗೆ ನಮೂದಾಗಿದೆ. ಚಾಸಾ- 1 ರವರು ಹೇಳಿಕೆ ಮೇಲೆ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.